ಕೆರೆಗಳಿಂದ ನಷ್ಟವಾಗುತ್ತಿರುವ ನೀರನ್ನು ಸದುಪಯೋಗಪಡಿಸಿಕೊಳ್ಳತಕ್ಕಂತಹ ಒಂದು ಸ್ಕೀಂ ಇದೆ. ಅದು 2.52 ಲಕ್ಷಗಳದ್ದಾಗಿದೆ. ಅದು ತಾಂತ್ರಿಕ ಸಲಹೆಯ ಮೇರೆಗೆ ಸೂಕ್ತವಾಗಿದ್ದರೆ ಸರ್ಕಾರದ ಯೋಗ್ಯ ಕ್ರಮ ತೆಗೆದುಕೊಂಡು ಅದನ್ನು ಕಾರ್ಯಗತ ಮಾಡುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ :— ಮಾರ್ಕೊನಹಳ್ಳಿ ಕೆರೆಯ ಅಚ್ಚುಕಟ್ಟು ಪ್ರದೇಶ 12800 ಎಕರೆಯ ಅದಾಜು ಇತ್ತು. ಈಗ 3600 ಎಕರೆ ಜಾಸ್ತಿಯಾಗಿರುವುದರಿಂದ ಅದರ ಮೇಲೆ ಸಕ ಎಲ್ಲಾ ವಿಧವಾದಂತಹ ಇರಿಗೇಷನ್ ಸೆಸ್ ಇತ್ಯಾದಿ ಹಾಕಿರುತ್ತಾರೆ. ಆದರೆ ಆ 3600 ಎಕರೆ ಅಚ್ಚುಕಟ್ಟುದಾರರಿಗೆ ನಿಯಾಗಿ ನೀರಿನ ವ್ಯವಸ್ಥೆ ಇಲ್ಲ. ಆದ್ದರಿಂದ ಅದನ್ನು ಉಠಾವಣೆ ಮ್ಮಾಡುವುದರ ಜೊತೆಗೆ ಮಂಗಳಾ ಕೆರೆಯ ಕೋಡಿ ನೀರನ್ನು ಉಪಯೋಗ ಮಾಡುವುದಕ್ಕೋಸ್ಕರ ಮಾರ್ಕೊನಹಳ್ಳಿಗೆ ಕಾಲುವೆ ಮುಖಾಂತರ ಒದಗಿಸಿ ಕೊಡುವುದಕ್ಕೆ ಆದಷ್ಟು ಜಾಗ್ರತೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್ :—ಮಳೆಗಾಲದಲ್ಲಿ ಮಂಗಳಾ ಕೆರೆಯ ನೀರು ನಷ್ಟವಾಗುವುದನ್ನು ತಪ್ಪಿಸಲು ಈಗಾಗಲೇ ಒಂದು ಸ್ಕೀಂ ನ ಎಸ್ಟಿಮೇಟ್ ತಯಾರಾಗಿದೆ. ಅಲ್ಲದೆ ಆರೂವರೆ ಅಡಿ ಹೆಚ್ಚು ಏರಿಸತಕ್ಕ ಯೋಚನೆಯೂ ಇದೆ. ಅವೆಲ್ಲವನ್ನು ವಿಶೇಷವಾದ ತನಿಖೆ ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

CONSTRUCTION OF BORE WELLS NEAR OVERHEAD TANKS IN BANGALORE

56. SRI K. R. SRINIVASALU NAIDU (Shanthinagar).—

Will the Minister for law and Municipal Administration be pleased to state :—

(*a*) the Number of wells in the Bangalore City Corporation area and how they are maintained by the Corporation ;

---

‡Astriks indicate that remarks or Speeches have not been revised by the member concerned.

(*b*) whether there are any bore wells dug in the Bangalore City Corporation area in Bangalore city, and if so, the amount spent for them ;

(*c*) whether Government propose to dig bore wells near overhead tank in Bangalore City Corporation area with a view to meet any emergent situation due to water scarcity in the city ;

(*d*) if so, the amount proposed to be spent for digging bore wells in Bangalore City Corporation area ?

SRI D. K. NAIKAR (Minister for Law and Municipal Administration).

(*a*) There are about 10,589 wells in the Corporation area. Out of which 8,336 are used wells and 2,253 are disused wells. Used wells are stocked with fishes and disused wells are sprayed with Mosquito Larvicidal Oil to minimise Mosquito breeding.

(*b*) 15 bore wells dug by the Corporation. Amount spent is about Rs. 78,600-00 according to the available information.

(*c*) No.

(*d*) Does not arise in view of reply to clause (c)

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು :—ನನ್ನ (ಇ) ಪ್ರಶ್ನೆಗೆ ಇಲ್ಲ ವೆಂದು ಉತ್ತರ ಹೇಳಿದ್ದೀರಿ ತುರ್ತು ಪರಿಸ್ಥಿತಿ ಯಾದ್ದು ಮತ್ತು ಬರಗಾಲ ಬಂದಾಗ ಉಂಟಾಗುತ್ತದೆ. ಆದ್ದರಿಂದ ಇದನ್ನು ಎದುರಿಸುವುದಕ್ಕೆ ಈಗಿನಿಂದಲೇ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಕೊಳವೆ ಬಾವಿಗಳನ್ನು ಏಕೆ ತೋಡಿಸ ಬಾರದು ? ಮತ್ತು ಶತ್ರು ಯಾವಾಗಲೂ ಎಲೆಕ್ಟ್ರಿಸಿಟಿ ಮತ್ತು ನೀರಿನ ಸಪ್ಲೈ ಕಡೆ ಕಣ್ಣು ಇಡುತ್ತಾನೆ. ಆದ್ದರಿಂದ ಈಗಲಾದರೂ ಇದರ ಬಗ್ಗೆ ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

‡ಶ್ರೀ ಡಿ. ಕೆ. ನಾಯಕರ್ :— ನಮಗೆ ಈ ಕಾವೇರಿ ನೀರಿನ ಸಪ್ಲೈ ಆಗುತ್ತಾ ಇರುವುದರಿಂದ ಈಗಿನ ಪರಿಸ್ಥಿತಿಯಲ್ಲಿ 1978ರ ವರೆಗೆ ಅಂಥ ಪರಿಸ್ಥಿತಿ ಬರುವುದಿಲ್ಲವೆಂದು ತಜ್ಞರ ಅಭಿಪ್ರಾಯ, ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು :— ಶತ್ರುಗಳು ಯಾವಾಗಲೂ ವಾಟರ್ ಸಪ್ಲೈ ಮತ್ತು ಎಲೆಕ್ಟ್ರಿಸಿಟಿ ಸಪ್ಲೈ ಇರುವಲ್ಲಿ ಬಾಂಬ್ ಹಾಕುತ್ತಾರೆ. ಹೀಗಿರುವಾಗ ನಿಮ್ಮ ಕಾವೇರಿ ವಾಟರ್ ಸಪ್ಲೈ ಆಗುವ ಕಡೆ ಬಾಂಬ್ ಹಾಕಿದರೆ ಏನು ಮಾಡುತ್ತೀರಿ?

ಶ್ರೀ ಡಿ. ಕೆ ನಾಯ್ಕರ್ :—ಬೋರ್‌ವೆಲ್ಸ್‌ಗಳಿಗೆ ಯಾವ ಪರಿಸ್ಥಿತಿ ಬರುತ್ತದೆ, ಅದೇ ಪರಿಸ್ಥಿತಿ ಅಲ್ಲಿಯೂ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ :—ಬೆಂಗಳೂರು ಸಿಟಿಯಲ್ಲಿ ಉಪಯೋಗಿಸದೆ ಇರುವ ಬಾವಿಗಳು ಅನೇಕ ಇವೆ. ಅವುಗಳ ಕಡೆ ಕಾರ್ಪೊರೇಷನ್‌ನವರು ಸಹ ಗಮನ ಕೊಡುತ್ತಾ ಇಲ್ಲ ಅವುಗಳಿಂದ ಅಪಾಯವೂ ಸಹ ಇದೆ. ಆದ್ದರಿಂದ ಅಂಥ ಬಾವಿಗಳನ್ನು ಮುಚ್ಚಿಸುವುದು ಒಳ್ಳೆಯದಲ್ಲವೇ?

ಶ್ರೀ ಡಿ. ಕೆ. ನಾಯ್ಕರ್ :— ಉಪಯೋಗದಲ್ಲಿಲ್ಲದ ಬಾವಿಗಳು ಏನಿವೆ, ಅವುಗಳು ಹೆಚ್ಚಾಗಿ ಶಿಥಿಲವಾದ ಪರಿಸ್ಥಿತಿಯಲ್ಲಿ ಇರುವುದರಿಂದ ಅದರ ಬಗ್ಗೆ ಕಾರ್ಪೊರೇಷನ್ ನೂಕವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು :—1973ಕ್ಕೆ ಅಭಾವ ಬರುತ್ತದೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಅಂಥ ಬಾವಿಗಳ ಗೃಹಬಳಕೆಯ ಉಪಯೋಗವನ್ನು ನಿಲ್ಲಿಸಿ, ತೋಟಗಳಿಗೆ ಉಪಯೋಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್ :—1978ರ ವರೆಗೆ ಈಗ ಇರುವ ನೀರು ಸಾಕಾಗುತ್ತದೆ ಎನ್ನುವ ಅಂದಾಜನ್ನು ನಾನು ಹೇಳಿದ್ದು; ಅಭಾವ ಬರುತ್ತದೆ ಎಂದು ಹೇಳಿಲ್ಲ.

WAGES TO WORKERS WORKING IN QUARRIES AT ARKERA

63. Sri MALLIKARJUN KHARGE (Gurmitkal) .— Will the Minister for Labour and Toursim be pleased to state ;

(a) the daily wages paid to female and male workers working in quarries at Arkera (K) Village in Yadgir Taluk

(b) whether the Minimum Wages Act has not been made applicable to such quarry workers ?